ವಯಸ್ಸಾಗಿತ್ತು.

'ನೀವು ಯಾವ ಮತಸ್ಥರು?' ಮುದುಕ ಪ್ರಶ್ನಿಸಿದ್ದ. ಇದು ನನಗೆ ಅತ್ಯಂತ ಬೇಡವಾದ ಪ್ರಶ್ನೆ. ಆದರೂ ಉತ್ತರಿಸಬೇಕಿತ್ತು. ಸಂಪ್ರದಾಯಸ್ಥ ಮುದುಕ. ಒಗ್ಗಿಸಿಕೊಳ್ಳುವುದು ಅನಿವಾರ್ಯವಾಗಿತ್ತು. 'ಒಕ್ಕಲಿಗರು' ಎಂದೆ. ಒಳಕ್ಕೆ ಕರೆದು ಚಾಪೆ ಹಾಕಿದರು. ಸಾಧಾರಣ ಕುಟುಂಬ. ನಾಡಕರ್ಣಿ ಹೇಳಿದಂತೆ ತಂದೆ–ತಾಯಿ ಒಬ್ಬಳು ತಂಗಿ ದಿವಾಕರನಿಗೆ. ಅವಳಿಗೂ ಮೂವತ್ತು ದಾಟಿತ್ತು.

'ಏನು ಬಂದದ್ದು, ಅವನು ಈ ಮನೆಗೆ ಕಾಲಿಟ್ಟು ಆರು ವರ್ಷ ಆಯ್ತು. ನಮ್ಮ ಸಂಸಾರನೇ ಸರ್ವನಾಶ ಮಾಡಿಬಿಟ್ಟ. ಅವನು ಬದುಕಿದ್ರೂ ಒಂದೇ ಸತ್ತರೂ ಒಂದೇ.'

'ಹಾಗೇಕೆ ಮಾತಾಡ್ತೀರಿ ಅವನು ಸತ್ತು ಹೋದ' ಎಂದೆ. ಹಠಾತ್ತನೆ ಅವರು ಹೆಂಡತಿಗೆ ಕೂಗಿ ಹೇಳಿದರು 'ನೋಡೇ ನಿನ್ನ ಕುಮಾರ ಹೋದ್ನಂತೆ. ಪಾಪಿ, ಅವನಿಗೆ ಅಲ್ಲಿ ಜಾಗ ಎಲ್ಲಿ, ಯಾವ ಪಾಪದ ಜನ್ಮವೆತ್ತಿ ನರಳ್ತಾನೋ– ಒಳ್ಳೆ ಸಂತೋಷದ ಸುದ್ದೀನೆ ತಂದ್ರಿ' ಒಳಗೆ ತಾಯಿ–ಮಗಳು ಬಿಕ್ಕಳಿಸುತ್ತಿದ್ದರು.

'ನೋಡ್ರಿ ಮಾರಾಯ್ರೆ... ಒಳಗಿರೋ ಹೆಣ್ಣು ಮಗುವಿನ ಬಾಳಿನ ಮೇಲೆ ಕಲ್ಲು ಹಾಕಿ ಹೋದ... ಸರ್ವನಾಶ ಮಾಡಿದ.'

'ಅದೇನು ಸರಿಯಾಗಿ ಹೇಳಿ ರಾಯರೆ... ಅರ್ಥವಾಗದವರಂತೆ ಮಾತನಾಡಬೇಡಿ. ದಿವಾಕರ ತುಂಬಾ ಒಳ್ಳೆಯವನು' ನಾನು ಸಮಾಧಾನಪಡಿಸಿದೆ.

'ಹೇಳೋಕೆ ಇನ್ನೇನು ಉಳಿದಿದೆ ಸ್ವಾಮಿ, ಅವನು ಭದ್ರಾವತೀಲಿ ಯಾವ್ದೋಳ್ನೋ ಹೊಲೇರೋಳ್ನ ಕಟ್ಕಂಡಿದ್ದ, ಕಿರಿಸ್ತಾನದ ಮತಕ್ಕೆ ಸೇರಿದ್ಲಂತೆ. ಕಿರಿಸ್ತಾನದ ಇಸ್ಕೂಲ್ನಾಗೆ ಮೇಡಂ ಆಗವ್ಳಂತೆ. ಅಷ್ಟೆ. ನಮ್ಮ ಮನೆತನದ ಮಾನ ಮರ್ಯಾದೆ ಎಲ್ಲಾನೂ ಹರಾಜು ಹಾಕ್ಬಿಟ್ಟ. ಈ ವಿಷಯ ಅರ್ಧ ಭದ್ರಾವತಿಗೇ ತಿಳಿದೋಯ್ತು. ಇವಳ ಕೊರಳಿಗೆ ತಾಳಿ ಕಟ್ಟೋನು ಯಾರೂ ಬರಲಿಲ್ಲ. ಅವನ ತಂಗಿಯಾಗಿ ಹುಟ್ಟಿದ್ದಕ್ಕೆ ಎಂತಹ ಉಡುಗೊರೆ ಕೊಟ್ಟ. ಅಂತಹ ಮಗ ಹುಟ್ಟಿದ ನನ್ನ ಹೊಟ್ಟೇಲಿ... ನನ್ನ ಪೂರ್ವ ಜನ್ಮದ ಪಾಪದ ಫಲ.' ಅವರು ಗದ್ಗಿತರಾದರು. ಅವರನ್ನು ಸಮಾಧಾನ ಪಡಿಸಿದ್ದೆ. ದಿವಾಕರನ ವಿಚಿತ್ರ ವ್ಯಕ್ತಿತ್ವ ಈಗ ಸ್ಪಷ್ಟವಾಗಿ ಅರ್ಥವಾಯಿತು. ಇಲ್ಲಿ ದಿವಾಕರ ಅಥವಾ ಕುಮುದ ಇಬ್ಬರೂ ತಪ್ಪಿತಸ್ಥರೆಂದು ನನಗೆ ಅನ್ನಿಸಲೇ ಇಲ್ಲ. ಕುಮುದ ಮತ್ತು ಅವಳ ಮಗುವಿನ ಬಗ್ಗೆ ಹೇಳಬೇಕೆನಿಸಿದರೂ ಹೇಳಲಿಲ್ಲ. ದಿವಾಕರನ ತಾಯಿ ಮತ್ತು ತಂಗಿ ಇಬ್ಬರೂ ತುಂಬಾ ದುಃಖದಿಂದಿದ್ದರು.

ಅಂದು ರಾತ್ರಿ ಅಲ್ಲಿಯೇ ಮಲಗಿದ್ದೆ. ಆ ಮುದುಕರು ದಿವಾಕರನನ್ನು ಓದಿಸಲು ತಾವು ಪಟ್ಟ ಪಾಡು, ಅವನ ಬಗ್ಗೆ ಕಾಣುತ್ತಿದ್ದ ಕನಸುಗಳು ಎಲ್ಲವನ್ನೂ ಮನ ಮಿಡಿಯುವಂತೆ ಹೇಳುತ್ತಿದ್ದರು. ಮೂಕನಂತೆ ನಾನು ಕೇಳುತ್ತಿದ್ದೆ. ಬೆಳಿಗ್ಗೆ ತಿಂಡಿ ತಿಂದು ಹೋಗುವಾಗ ದಿವಾಕರನ ತಂಗಿ ಶೈಲಜಾಳ ಕಣ್ಣಲ್ಲಿ ನೀರು ಹನಿಹನಿಯಾಗಿ ತೊಟ್ಟಿಕ್ಕುತ್ತಿದ್ದವು. ಅವಳ ನಿಸ್ತೇಜವಾದ ಕಣ್ಣೀರಿನ ಹನಿಗಳಿಗೂ, ದಿವಾಕರನ ಸಾವಿಗೂ, ಕುಮುದಳ ನಿರ್ಲಿಪ್ತ ನಡವಳಿಕೆಗಳಿಗೂ... ಏನೆಲ್ಲ ಸಂಬಂಧಗಳು. ಈ ಅಧ್ವಾನ ವ್ಯವಸ್ಥೆಯೇ ಹಾಗೆ ಎಂದು ಕೊಂಡವನು. ಎಂಟು ಸಾವಿರ ರೂಪಾಯಿಗಳನ್ನು ಶೈಲಜಾಳ ಕೈಯಲ್ಲಿ ಬಲವಂತದಿಂದ ಇರಿಸಿ ಬಸ್‌ಸ್ಟಾಪಿನ ಕಡೆ ನಡೆದೆ. ನಡೆದಂತೆ ಹೃದಯ ಭಾರವಾಯಿತು. ನನ್ನ ಹೃದಯದಲ್ಲಿ ದಿವಾಕರ, ಕುಮುದ, ಶೈಲಜಾ, ನಾಡಕರ್ಣಿ ಎಲ್ಲರೂ ನರ್ತನ ಮಾಡತೊಡಗಿದ್ದರು.

✿